**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 22/2020**

ಪಿ ಡಬ್ಲ್ಯೂ-1

**ದಿನಾಂಕ 24-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀಮತಿ ಡಿ ಎಸ್ ಎಮ್ 1ನೇ ಪ್ರತಿವಾದಿ ಪರ ವಕೀಲರುಃ**

ನಮ್ಮ ತಂದೆಯ ಹೆಸರು ವೆಂಕಟರಾಮಯ್ಯ. ನಮ್ಮ ತಂದೆ 2017 ರಲ್ಲಿ ಮೃತಪಟ್ಟಿರುತ್ತಾರೆ. ಆಗ ಅವರಿಗೆ ವಯಸ್ಸು 80 ವರ್ಷ. ವೆಂಕಟರಾಯಮ್ಮ ರವರಿಗೆ ಒಟ್ಟು 4 ಜನ ಮಕ್ಕಳು. ನಾನು, ನನ್ನ ತಮ್ಮಶಿವಯ್ಯ. ಅಕ್ಕ ರಾಜಮ್ಮ ಮತ್ತು ತಂಗಿ ಶೋಭಾ. ನಾವು ವಾಸವಾಗಿರುವ ಮನೆಯ ಖಾತಾ ನಂಬರ್ ನನಗೆ ಗೊತ್ತಿರುವುದಿಲ್ಲ. ನನಗೆ ವಾಸವಾಗಿರುವ ದಾವಾ ಷೆಡ್ಯೂಲ್ ವಾಸದ ಮನೆಯ ಖಾತಾ ಸಂಖ್ಯೆ , ಜಂಜರ್ ನಂವರ ಮತ್ತು ಅಸೆಸ್ಮಂಟ್ ಸಂಖ್ಯೆ ನನಗೆ ಗೊತ್ತಿರುವುದಿಲ್ಲ.

2. ನಾವು ವಾಸವಾಗಿರುವ ಮನೆಯ ವಿಸ್ತೀರ್ಣದ ಉದ್ದ 35 ಅಡಿ ಅಗಲ ನನಗೆ ನೆನಪಿರುವುದಿಲ್ಲ. ಸದರಿ ಮನೆಯಲ್ಲಿ ಎರಡು ಭಾಗಗಳಿವೆ. ನಾವು ಒಂದು ಭಾಗದಲ್ಲಿದ್ದು ಇನ್ನೊಂದು ಭಾಗದಲ್ಲಿ 1 ನೇ ಪ್ರತಿವಾದಿ ಶೋಭಾ ರವರು ವಾಸವಾಗಿದ್ದಾರೆ. ನನ್ನ ಭಾಗ ಮತ್ತು ಶೋಭಾ ರವರ ಭಾಗ ಒಟ್ಟು ಸೇರಿಸಿ 35 ಅಡಿ ಇರಬಹುದು. ಸಾಕ್ಷಿ ಮುಂದುವರೆದು ಸದರಿ ಮನೆಯನ್ನು ನಾವು ಅಳತೆ ಮಾಡಿರುವುದಿಲ್ಲ. ನಮ್ಮ ತಂದೆಇಬ್ಬರಿಗೂ ಸಹ ಎರಡು ಭಾಗ ಮಾಡಿ ನನಗೆ ಮತ್ತು ಶೋಭಾಳಿಗೆ ನೀಡಿರುತ್ತಾಳೆ.

3. ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ ಬಂದಿ ಪಶ್ಚಿಮಕ್ಕೆ. ಕೆಂದಯ್ಯನ ಮನೆ. ದಕ್ಷಿಣಕ್ಕೆ ಸಿದ್ದಯ್ಯನ ಮನೆ. ಪೂರ್ವಕ್ಕೆ - ಕಾಂಪೌಡ್ ಮತ್ತು ರಸ್ತೆ ಇದೆ. ಉತ್ತರಕ್ಕೆ- ನಮ್ಮದೇ ಖಾಲಿ ನಿವೇಶನ ಇದೆ. ಸದರಿ ದಾವಾ ಮನೆಯು ನಮ್ಮ ತಂದೆಗೆ ನಮ್ಮ ತಾತನ ಕಡೆಯಿಂದ ಬಂದಿರುತ್ತದೆ. ನಮ್ಮ ತಂದೆ ಸದರಿ ಮನೆಯು ಅವರ ತಾತನಿಂದ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಗಳು ನೀಡಿರುವುದಿಲ್ಲ.

4. ನಮ್ಮ ತಂದೆಗೆ ದಾವಾ ಮನೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಆಸ್ತಿಯು ಇರುವುದಿಲ್ಲ. ಅಸೆಸ್ಮಂಟ್ ನಂಬರ್ 94/124/1 ಖಾಲಿ ನಿವೇಶನ ನಮ್ಮ ತಂದೆಗೆ ಸೇರಿದ ನಿವೇಶನ. ಸದರಿ ನಿವೇಶನ ಮುಕ್ಕಾಲು ಭಾಗ ನಮ್ಮ ತಮ್ಮನಿಗೆ ನೀಡಿದ್ದು ಸದರಿ ನಿವೇಶನದ ಕಾಲು ಭಾಗ ನಮ್ಮ ತಂದೆ ನನಗೆ ನೀಡಿರುತ್ತಾರೆ. ನನಗೆ ನೀಡಿರುವ ಖಾಲಿ ನಿವೇಶನದ ಅಳತೆ 25 X 24 ಅಡಿ ಎಂದರೆ ನನಗೆ ಗೊತ್ತಿರುವುದಿಲ್ಲ ನಾನು ಅಳತೆ ಮಾಡಿಸಿರುವುದಿಲ್ಲ.

5. ಅದೇ ರೀತಿ ನನ್ನ ತಮ್ಮ ಶಿವನಿಗೆ 15 X 24 ಅಡಿ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತೀ ನಮ್ಮ ಅತ್ತೆಯ ಮೋಮ್ಮಗ ನಾಗರಾಜು ಅವರಿಗೆ ಸ್ವಲ್ಪ ನಿವೇಶನವನ್ನು ನೀಡಿರುತ್ತಾರೆ ಎಂದರೆ ಸರಿ. ನನ್ನ ತಮ್ಮ ಶಿವನ ಭಾಗದ ನಿವೇಶನದಲ್ಲಿ ಅವನು ಮನೆಯನ್ನು ಕಟ್ಟಿಕೊಂಡಿರತ್ತಾನೆ ಎಂದರೆ ಸಾಕ್ಷಿ ನಮ್ಮ ತಂದೆ ಅವನಿಗೂ ಸಹ ಒಂದು ಮನೆಯನ್ನು ಅವರೇ ನಿರ್ಮಾಣ ಮಾಡಿಕೊಟ್ಟಿದ್ದು ಪ್ರಸ್ತುತ ನಮ್ಮ ತಮ್ಮ ಸದರಿ ನಮ್ಮ ತಂದೆ ನಿರ್ಮಾಣ ಮಾಡಿ ಕೊಟ್ಟಿರುವ ಮನಯ ಜೊತೆಗೆ ಇನ್ನು ಸ್ವಲ್ಪ ಮನೆಯನ್ನು ನಿರ್ಮಾಣ ಮಾಡಿಕೊಂಡಿದ್ದಾನೆ.

6. ನಮ್ಮ ತಮ್ಮನ ಭಾಗಕ್ಕೆ ಬಂದ ನಿವೇಶನ ಮತ್ತು ಮನೆ ಅವನ ಹೆಸರಿನಲ್ಲಿ ಇದೆಯೋ ಇಲ್ಲಮೋ ನನಗೆ ಗೊತ್ತಿರುವುದಿಲ್ಲ. ನಮ್ಮ ತಮ್ಮ ಸರ್ಕಾರದಿಂದ ಇಂದಿರಾ ಆವಾಸ ಯೋಜನೆಯಲ್ಲಿ 2012 ರಲ್ಲಿ ಮನೆಯನ್ನು ನಿರ್ಮಾಣ ಮಾಡಲು ಹಣ ಸಹಾಯವನ್ನು ಪಡೆದು ಮನೆಯನ್ನು ನಿರ್ಮಾಣ ಮಾಡಿದ್ದಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅಸೆಸ್ಮಂಟ್ ನಂಬರ್ 94/124/1 ರಲ್ಲಿ 1 ನೇ ಪ್ರತಿವಾದಿ ಶೋಭಾ ರವರಿಗೆ ಯಾವುದೇ ಭಾಗ ನೀಡಿರುವುದಿಲ್ಲ . ಸಾಕ್ಷಿ ಮುಂದುವರೆದು ನನ್ನ ತಂಗಿ ಅದರಲ್ಲಿಯೂ ಭಾಗ ತೆಗೆದುಕೊಳ್ಳಲಿ ಎಂದು ತಿಳಿಸಿರುತ್ತಾರೆ.

7. ನಮಗೂ ಸಹ 2012 ನೇ ಇಸವಿಯಲ್ಲಿ ಮನೆಯನ್ನು ನಿರ್ಮಾಣ ಮಾಡಿಕೊಳ್ಳಲು ಗ್ಯ್ರಾಂಟ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ಕಾರದಿಂದ ಮನೆ ನಿರ್ಮಾಣಕ್ಕೆ ಮಂಜೂರಾದ ಹಣವನ್ನು ನಾವು ಉಪಯೋಗಿಸಿಕೊಂಡು ಮನೆಯನ್ನು ನಿರ್ಮಾಣ ಮಾಡದ

ಕಾರಣ ಸದರಿ ಮಂಜೂರಾತಿ ಹಣ ಸರ್ಕಾರಕ್ಕೆ ಹಿಂದಿರುಗಿ ಹೋಗಿರುತ್ತದೆ ಎಂದರೆ ಸರಿ. ಅದೇ ರೀತಿ ಇತ್ತಿಚೇಗೆ 2020 ನೇ ಇಸವಿಯಲ್ಲಿ ಮತ್ತೊಂದು ಬಾರಿ ನನಗೆ ನಿವೇಶನದಲ್ಲಿ ಮನೆಯನ್ನು ನಿರ್ಮಾಣ ಮಾಡಲು ಸರ್ಕಾರದಿಂದ ಹಣ ಮಂಜೂರಾಗಿರುತ್ತದೆ ಎಂದರೆಸರಿಯಲ್ಲ.

8. ಸದರಿ ಖಾಲಿ ನಿವೇಶನದಲ್ಲಿ ಮನೆಯನ್ನು ನಿರ್ಮಾಣ ಮಾಡಿಕೊಂಡು ವಾಸಿಸಲು ನನಗೆ ಸಾಧ್ಯವಿಲ್ಲ. ನಾನು ಹುಟ್ಟಿರುವ ಮನೆಯಲ್ಲೇ ನಾನು ಇರಬೇಕು ಎಂದು ತಿಳಿಸಿರುತ್ತಾರೆ. ನಾವು ವಾಸವಾಗಿರುವ ಮನೆಗಿಂತ ನನ್ನ ನಿವೇಶನದ ಭಾಗದ ಅಳತೆಯು ದೊಡ್ಡದು ಎಂದರೆ ಸರಿಯಲ್ಲ. ಸದರಿ ಹಾಲಿ ವಾಸವಾಗಿರುವ ಮನೆಯ ವಿಚಾರವಾಗಿ ನಮ್ಮಗಳ ಮಧ್ಯ ಆಗಿಂದಾಗ್ಗೆ ಮನಸ್ತಾಪಗಳು ಉಂಟಾಗಿ ನಾವು ಸದರಿ ಮನಸ್ತಾಪದಿಂದ ಪೊಲೀಸ್ ಠಾಣೆಗೂ ಸಹ ಹೋಗಿರುತ್ತೇವೆ ಎಂದರೆ ಸರಿಯಲ್ಲ.

9. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ನಮ್ಮ ತಂದೆ ನಾವು ವಾಸವಾಗಿರುವ ಮನೆಯನ್ನು ಅವರಿಗೆ ಅರಿಸಿನ ಕುಂಕುಮಕ್ಕೆ ಬರೆದು ಕೊಟ್ಟಿರುತ್ತಾರೆ ಎಂದು ನಮ್ಮನ್ನು ಮನೆ ಬಿಡುವಂತೆ ನ್ಯಾಯಲಾಯಕ್ಕೆ ಮತ್ತು ಪೊಲೀಸ್ ಠಾಣೆಗೆ ಬಂದಿರುತ್ತಾರೆ ಮತ್ತು ದೂರನ್ನು ಕೊಟ್ಟಿರುತ್ತಾರೆ. ನಾವು ಸಹ ಸದರಿ ಮನೆಯ ವಿಚಾರವಾಗಿ ಪೊಲೀಸ್ ಠಾಣೆಗೇ ಹೋಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ